ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2018–19 :** **ದಿನಾಂಕ : 09–08–2018**

# ಪತ್ರಿಕಾ ಪ್ರಕಟಣೆ

**ಸಂಖ್ಯೆ: 802/912**

## ಸ್ಪರ್ಧಾತ್ಮಕ ಸ್ಪರ್ಧೆ ಮೂಲಕ ಆಯ್ಕೆ

ಬೆಂಗಳೂರು, ಆಗಸ್ಟ್ 9, (ಕರ್ನಾಟಕ ವಾರ್ತೆ)

ಅರಣ್ಯ ಇಲಾಖೆಯು ಅರಣ್ಯ ಹಾಗೂ ವನ್ಯಜೀವಿಗೆ ಸಂಬಂಧಿಸಿದಂತೆ ಉತ್ತಮ ಮಾಹಿತಿಗಳನ್ನು ಇನೋವೇಟಿವ್ ವಿಡಿಯೋ ಕ್ಲಿಪ್/ಚಲನಚಿತ್ರದ ಮೂಲಕ ಸ್ಪರ್ಧೆಯಲ್ಲಿ ಭಾಗವಹಿಸಲು ದಿನಾಂಕ: 15–08–2018 ರವರೆಗೆ ಕಾಲಾವಕಾಶವನ್ನು ನೀಡಿ ಮುಂದೂಡಲಾಗಿದೆ.

ಈ ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಪ್ರತಿ ಒಬ್ಬ ಸ್ಪರ್ಧಿ/ತಂಡಗಳು/ಎಲ್ಲಾ ಸಂಸ್ಥೆಗಳವರು ಈ ಸ್ಪರ್ಧಾತ್ಮಕ ಸ್ಫರ್ಧೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 803/913**

## ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ – 2019

ಬೆಂಗಳೂರು, ಆಗಸ್ಟ್ 9, (ಕರ್ನಾಟಕ ವಾರ್ತೆ)

ಭಾರತ ಚುನಾವಣಾ ಆಯೋಗದ ಅನುಸಾರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ–2019 ನ್ನು ಈಗಾಗಲೇ ಕೈಗೊಂಡಿದ್ದು, ಈ ಸಂಬಂಧ ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಬಗ್ಗೆ ಖಚಿತಪಡಿಸಿಕೊಳ್ಳಲು/ಹೆಸರನ್ನು ಸೇರಿಸಲು/ಮತದಾರರ ಪಟ್ಟಿಯಿಂದ ಹೆಸರನ್ನು ತೆಗೆದು ಹಾಕಲು

ಬಿ.ಎಲ್.ಓ. ಗಳು ಮನೆ–ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಅವರಿಗೆ ಅಗತ್ಯ ಮಾಹಿತಿಯನ್ನು ನೀಡಿ ಸಹಕರಿಸುವಂತೆ ಕೋರಿದೆ.

ಬಿ.ಎಲ್.ಓ ಅಧಿಕಾರಿಗಳು ಆಗಸ್ಟ್ 10 ರವರೆಗೆ ಮನೆಗೆ ಭೇಟಿ ನೀಡಲಿದ್ದು, ಜನವರಿ 1, 2018 ಕ್ಕೆ 18 ವರ್ಷ ವಯೋಮಾನ ತುಂಬಿರುವ ಯುವಕ–ಯುವತಿಯರು ತಮ್ಮ ಹೆಸರುಗಳನ್ನು ಚುನಾವಣಾ ಪರಿಷ್ಕರಣ ಪಟ್ಟಿಗೆ ನೋಂದಾಯಿಸಿಕೊಳ್ಳಬಹುದು ಹಾಗೂ ಜನವರಿ 1, 2019 ರೊಳಗೆ 18 ವರ್ಷ ವಯೋಮಾನ ತುಂಬುವ ಯುವಕ–ಯುವತಿಯರು ಹೊಸದಾಗಿ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬಹುದು.

ಚುನಾವಣಾ ಪರಿಷ್ಕರಣ ಪಟ್ಟಿಯಲ್ಲಿರುವ ಸಾರ್ವಜನಿಕರು ಮನೆಯನ್ನು ಸ್ಥಳಾಂತರಿಸಿದ್ದರೆ ಅಥವಾ ಮರಣ ಹೊಂದಿದ್ದಲ್ಲಿ ಅಂತಹವರ ಮಾಹಿತಿಯನ್ನು ಮನೆಗೆ ಭೇಟಿ ನೀಡುವ ಬಿ.ಎಲ್.ಓ. ಅಧಿಕಾರಿಗಳಿಗೆ ನೀಡುವ ಮೂಲಕ ಮತದಾರರ ಪಟ್ಟಿಯಿಂದ ಅವರ ಹೆಸರಗಳನ್ನು ತೆಗದುಹಾಕಬಹುದಾಗಿದೆ.

ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರುಗಳು ಎರಡು ಸಲ ದಾಖಲಾಗಿದ್ದರೆ, ಅಥವಾ ಪುನರಾವರ್ತನೆಯಾಗಿದ್ದರೆ ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯಲು ಅವಕಾಶವಿದೆ.

ಇದೇ ಸಂದರ್ಭದಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ತಪ್ಪಾಗಿದ್ದಲ್ಲಿ ಅದನ್ನು ಸರಿಪಡಿಸಲು ಅಥವಾ ತೆಗೆದುಹಾಕಲು ಬಿ.ಎಲ್.ಓ. ಗಳಲ್ಲಿ ಮನವಿ ಮಾಡುವಂತೆ ತಿಳಿಸಿದೆ.

ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಎಂದು ಪರೀಕ್ಷಿಸಲು ಚುನಾವಣಾ ಆಯೋಗದ ವೆಬ್‌ಸೈಟ್ ceokarnataka.kar.nic.in ಅನ್ನು ವೀಕ್ಷಿಸಬಹುದಾಗಿದೆ ಅಥವಾ ಚುನಾವಣಾ ಆ್ಯಪ್ (Chunawana APP) ಅನ್ನು ಬಳಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 804/914**

**ಬೆಂಗಳೂರು ಜಲಮಂಡಲಿ : ಆಗಸ್ಟ್ 10 ರಂದು (ಪೂರ್ವ–2) ಉಪವಿಭಾಗದಲ್ಲಿ ನೀರಿನ ಅದಾಲತ್**

**ಬೆಂಗಳೂರು, ಆಗಸ್ಟ್ 9, (ಕರ್ನಾಟಕ ವಾರ್ತೆ) :**

ಬೆಂಗಳೂರು ಜಲಮಂಡಲಿಯ (ಪೂರ್ವ–2) ಉಪ ವಿಭಾಗದಲ್ಲಿ 10.08.2018 ರಂದು ಶುಕ್ರವಾರ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆಗೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ 10.08.2018 ರಂದು (ಪೂರ್ವ–2) ಉಪ ವಿಭಾಗ ವ್ಯಾಪ್ತಿಯ ಎ.ಇ.ಸಿ.ಎಸ್ ಲೇಔಟ್, ಹೂಡಿ, ಭುವನೇಶ್ವರಿನಗರ ಸೇವಾ ಠಾಣೆ ವ್ಯಾಪ್ತಿಯ ಕುಂದುಕೊರತೆಗಳಿಗೆ ಸಂಬಂಧಿಸಿದತೆ

ಸಮಸ್ಯೆಗಳನ್ನು ಬಿಇಎಂಎಲ್ ಲೇಔಟ್, ಐಟಿಪಿಎಲ್ ಕುಂದಲಹಳ್ಳಿ ಮುಖ್ಯ ರಸ್ತೆ ಹತ್ತಿರ, ಇಲ್ಲಿನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ-2) ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ)22945158. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ-2) ಉಪವಿಭಾಗ-22945115.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ-22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ-8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ನೀರಿನ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳ ಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 805/915**

# BWSSB water Adalath

**Bengaluru, August 9 (Karnataka Information)**

BWSSB water Adalath is held on 10.08.2018 in (East-2) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of AECS Layout, Hoodi, Bhuvaneshwari Nagar service station coming under East-2 sub division, will be discussed in detail & problems will be settled in the office of the Assistant Executive Engineer (East-2) sub division, BEML Layout, Near ITPL Kundalahalli Main Road.

Details regarding the adalath can be obtained by the office of EE(East) :22945158, or office of AEE (East-2) 22945115

For any problems regarding the water supply and all, publics can contact 24x7 call centre :22238888 helpline number:1916 & whats app no: 8762228888.